ದಕ್ಷಿಣ ಭಾಗದಲ್ಲಿದ್ದು ಸಾಹಿತ್ಯ ರಚನೆ ಮಾಡುವವರಿಗೆ ಫಾಕ್ನರ್ ದೈತ್ಯಾಕಾರದ ಪ್ರೇರಣೆಯಾಗಿ ನಿಂತಿದ್ದಾನೆ. ಫಾಕ್ನರ್ ಬಗ್ಗೆ ಅನೇಕ ಕಥನಗಳಿವೆ. ಅದರಲ್ಲಿ ಒಂದು – ಅವನಿಗೆ ನೊಬೆಲ್ ಬಂದಾಗ ಅಮೆರಿಕದ ಅಧ್ಯಕ್ಷರು ಔತಣಕೂಟಕ್ಕೆಂದು ಆಹ್ವಾನಿಸಿದ್ದರಂತೆ. ಬರೇ ಊಟ ಮಾಡುವುದಕ್ಕೆ ಅಷ್ಟು ದೂರ ಪ್ರಯಾಣಿಸುವುದು ಸೂಕ್ತವಲ್ಲ ಎಂದು ಫಾಕ್ನರ್ ನಿರಾಕರಿಸಿದ್ದನಂತೆ. ರಶ್ದಿ ಅಮೆರಿಕದ ದಕ್ಷಿಣ ಭಾಗದ ಬರಹಗಾರ್ತಿ ಯುಡೋರಾ ವೆಲ್ಟಿಯನ್ನು ಭೇಟಿಯಾಗುವ ಸಂಭ್ರಮದಲ್ಲಿ, ಆಕೆಯ ಮೇಲೆ ಫಾಕ್ನರ್ ಬೀರಿರಬಹುದಾದ ಪ್ರಭಾವದ ಬಗ್ಗೆ ಕೇಳುತ್ತಾರೆ. 'ಫಾಕ್ನರ್ ಪ್ರಭಾವ ನಿಮಗೆ ಪೂರಕವಾಗಿತ್ತೇ ಅಥವಾ ಅದು ಕಿರಿಕಿರಿಯ ವಿಷಯವಾಗಿತ್ತಾ?' ಎಂದು ರಶ್ದಿ ಕೇಳುವ ಪ್ರಶ್ನೆಗೆ ವೆಲ್ಟಿ ಹೇಳುವುದು: 'ಯಾವುದೂ ಅಲ್ಲ. ಸಮೀಪದಲ್ಲಿ ಒಂದು ದೊಡ್ಡ ಪರ್ವತವಿದ್ದಂತೆ. ಪಕ್ಕದಲ್ಲಿ ಈ ಪರ್ವತವಿದೆಯೆನ್ನುವುದು ಸಂತಸದ ವಿಷಯವಾದರೂ ಅದರಿಂದ ನನ್ನ ಕೆಲಸಕ್ಕೆ ಯಾವ ಪ್ರಯೋಜನವೂ ಇಲ್ಲ'. ರಶ್ದಿ ಬಿಡದೇ ಮತ್ತೊಂದು ಪ್ರಶ್ನೆಯನ್ನು ಕೇಳುತ್ತಾರೆ – 'ಫಾಕ್ನರ್ ನಿಮಗೆ ಅತ್ಯಂತ ಸಮೀಪದ ಲೇಖಕರಲ್ಲವೇ?'. ಅದಕ್ಕೆ ಜವಾಬು: 'ಖಂಡಿತಾ ಇಲ್ಲ. ನಾನು ಜಾಕ್ಸನ್‌ನಲ್ಲಿದ್ದೇನೆ. ಆತ ಆಕ್ಸ್‌ಫರ್ಡ್‌ನಲ್ಲಿ. ಬಹಳ ದೂರ' ಎನ್ನುತ್ತಾಳೆ. ಫಾಕ್ನರ್ ಪ್ರಭಾವವೋ ಅಥವಾ ಅಲ್ಲಿನ ಹಾಸ್ಯಪ್ರಜ್ಞೆಯೋ...

'ಸಟಾನಿಕ್ ವರ್ಸಸ್' ಬಂದಾಗ ಅದನ್ನು ವಿರೋಧಿಸಿದವರು ಮುಸ್ಲಿಂ ಮೂಲಭೂತವಾದಿಗಳು ಮಾತ್ರವಲ್ಲ. ಬದಲಿಗೆ ಅದು ಓದಿಸಿಕೊಳ್ಳದ ಕಠಿಣ ಪಠ್ಯವೆಂದೂ, ಖೊಮೇನಿ ಅದರ ಮೇಲೆ ನಿರ್ಬಂಧ ಹೂಡದಿದ್ದರೂ, ಅದು ಸೋಲುತ್ತಿತ್ತೆಂದು, ಆ ಕಾದಂಬರಿಯ ಹದಿನೈದು ಪುಟಗಳು ಓದಿದರೆ, ಅದೇ ಪರಮಸಾಧನೆಯೆಂದು ಲೇವಡಿ ಮಾಡಿದವರಿದ್ದಾರೆ. ಆದರೆ ಹಾಗೆ ಲೇವಡಿ ಮಾಡುವಾಗ ನಾವು ಪಠ್ಯಕ್ಕೆ ಸರಿಯಾದ ನ್ಯಾಯವನ್ನು ಒದಗಿಸುವುದಿಲ್ಲ. ಸಾಹಿತ್ಯದ ಕಾರಣಕ್ಕಾಗಿ ಅದರ ಬಗ್ಗೆ ಭಿನ್ನಾಭಿಪ್ರಾಯವಿದ್ದರೆ ಅದನ್ನು ಜೀವ ತೆಗೆವ ಬೆದರಿಕೆಯೊಂದಿಗೆ ಬೆರೆಸುವುದು ಸರಿಯಲ್ಲ. ಹೀಗೆ ಮಾಡಿದಾಗ ಸಾಹಿತ್ಯದ ಘನತೆಯೂ ಖೊಮೇನಿಯ ಬೆದರಿಕೆಯಲ್ಲಿರಬಹುದಾದ ಗಂಭೀರ ಆತಂಕವೂ ಲಘುವಾಗಿಬಿಡುತ್ತದೆ. ರಶ್ದಿಯವರಿಗೆ ಜೀವಭಯಕ್ಕಿಂತ, ಆ ಕಾದಂಬರಿ ಸಾಹಿತ್ಯೇತರ ಕಾರಣಗಳಿಗೆ ಸುದ್ದಿಯಾಯಿತೆನ್ನುವುದೇ ಹೆಚ್ಚಿನ ನೋವನ್ನುಂಟು ಮಾಡಿತೇನೋ?

ಸ್ವಾತಂತ್ರ್ಯ ಮತ್ತು ಮುಕ್ತತೆ ಅಂದರೇನು? ರಶ್ದಿ ಹೀಗೆ ಬರೆಯುತ್ತಾರೆ: 'ಮೇಲೆ ಒಬ್ಬ ಕೂತು ದೊಡ್ಡ ನಲ್ಲಿಗಳಿಂದ ನಾವು ಉಸಿರಾಡುವ– ತಂಪು, ಬಿಸಿ, ಬೆಚ್ಚಗಿನ– ಗಾಳಿಯನ್ನು ಹೊರಲೋಕದಲ್ಲಿ ಮಿಶ್ರಣ ಮಾಡಿ, ನಮ್ಮ ಉಸಿರಾಟಕ್ಕಾಗಿ ಬಿಡುತ್ತಿದ್ದಾನೆ. ನಮಗೆ ಗೊತ್ತಿರುವ, ಅಥವಾ ಗೊತ್ತಿರದ ಈ ಮನುಷ್ಯ ಒಂದು ದಿನ ಒಂದೊಂದೇ ನಲ್ಲಿಯನ್ನು ಮುಚ್ಚುತ್ತಾ ಮುಂದುವರೆಯುತ್ತಾನೆ. ಉಸಿರಾಡಲು ಇರುವ ಗಾಳಿ ಕಮ್ಮಿಯಾಗುತ್ತಿದೆ ಎಂದು ನಮಗೆ ಗೊತ್ತಾಗುತ್ತದೆ. ಏದುಸಿರು ಎಳೆಯುತ್ತಲೇ ನಾವು ಪ್ರತಿಭಟಿಸಲು ಪ್ರಾರಂಭಿಸುತ್ತೇವೆ. ಗಾಳಿ ಕಡಿಮೆಯಾದಷ್ಟೂ ಪ್ರತಿಭಟನೆ ಹೆಚ್ಚುತ್ತದೆ. ಯಾವುದಿಲ್ಲವೋ, ಅದಕ್ಕೆ ನಾವು ತಹತಹಿಸುತ್ತೇವೆ'. ಮುಕ್ತತೆ ಮತ್ತು ಸ್ವಾತಂತ್ರ್ಯ ಉಸಿರಾಡುವ ಗಾಳಿಯಂತೆಯೇ. ಅದು ಇದ್ದಾಗ ಕಾಣುವುದಿಲ್ಲ. ಇಲ್ಲದಾದಾಗ ಅದರ ಅನುಭವವಾಗುತ್ತದೆ.

ಬೇರೆಯವರ ಭಾವನೆಗಳನ್ನು ಘಾತಗೊಳಿಸಲು ಲೇಖಕರು ಬರೆಯುತ್ತಾರೆಯೇ ಅಥವಾ ಅದನ್ನು ಹಾಗೆಂದು ಪರಿಗಣಿಸಲಾಗುತ್ತದೆಯೇ? ಎಂ.ಎಫ್. ಹುಸೇನ್ ಭಾರತೀಯ ದೇವತೆಗಳನ್ನು ನಗ್ನರೂಪದಲ್ಲಿ ಚಿತ್ರಿಸಿದ್ದು ಯಾರನ್ನಾದರೂ ನೋಯಿಸಲೇ ಅಥವಾ ಅದರಲ್ಲಿ ಸೃಜನಶೀಲತೆಯ ಅರ್ಥ ಅಡಗಿತ್ತೇ? ಈ ಪ್ರಶ್ನೆಯನ್ನು ಕೇಳುವ ವ್ಯವಧಾನ ಒಮ್ಮೊಮ್ಮೆ ಇರುವುದಿಲ್ಲ. ಕಲೆಗಾರನ ಅಮಾಯಕತ್ವ ಇದ್ದಕ್ಕಿದ್ದ ಹಾಗೆ ಪಾಪಪ್ರಜ್ಞೆಯಾಗಿ ಪರಿವರ್ತಿತಗೊಳ್ಳುತ್ತದೆ. ಈ ಆಲೋಚನಾಸರಣಿ ಮುಕ್ತವಾಗಿದ್ದೂ ಬಂಧನದಲ್ಲಿರುವ ರಶ್ದಿಯವರಿಗೇ ಸಾಧ್ಯವಾದದ್ದು.

ರಶ್ದಿಯವರ ಬರಹಗಳಲ್ಲಿ ಪುನರಾವರ್ತನೆಗೊಳ್ಳುವ ಒಂದು ವಿಚಾರವೆಂದರೆ, ಕಥನದಲ್ಲಿ ನಿಜಜೀವನ ಎಷ್ಟು ಅಡಕವಾಗಿದೆ ಎನ್ನುವ ಪ್ರಶ್ನೆ. ಎಷ್ಟೋ ಬಾರಿ ಊಹಿಸಿ ಬರೆದ ಪಾತ್ರಗಳು ಧುತ್ತೆಂದು ಎದುರಿಗೆ ನಿಂತು, 'ನಿಮ್ಮ ಕಾದಂಬರಿಯಲ್ಲಿ ಚಿತ್ರಿಸಿದ ಈ ವ್ಯಕ್ತಿ ನಾನೇ, ಆದರೆ ನೀವು ನನ್ನ ಜೀವನವನ್ನು ಸರಿಯಾಗಿ ಚಿತ್ರಿಸಿಲ್ಲ' ಎನ್ನುವ ವಿಚಾರವನ್ನು ಎದುರಿಸುತ್ತಿರುವುದು ರಶ್ದಿ ಮಾತ್ರವೇ ಅಲ್ಲ. ಬದಲಿಗೆ ಅದು ಎಲ್ಲ ಲೇಖಕರ